# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)


SD RGRHCL 01 ANRT 02 2017-18 / 5406 Date:16.05.2017

ಇವರಿಗೆ
ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು
ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು

ಮಾನ್ಯರೆ

ವಿಷಯ: ನಿವೇಶನ ಹೊಂದಿರುವ ವಸತಿ ರಹಿತ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಡಾ॥.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ಬೇಡಿಕೆ ಮೇಲ ಮನೆ ನೀಡುವ ಪದ್ಧತಿಗೆ ಚಾಲನೆ ನೀಡುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2017–18ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ವಸತಿ ರಹಿತ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡವ ಕುಟುಂಬಗಳಿಗೆ (ನಿವೇಶನ ಹೊಂದಿರುವ) ಡಾ॥.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ಬೇಡಿಕೆ ಮೇಲೆ ಮನೆ ಒದಗಿಸಲು ಈ ಕೆಳಕಂಡ ಪ್ರಕಾರ ಜಾರಿಗೆ ತರಲು ಸೂಚಿಸಲಾಗಿದೆ.

1. ಮೇಲಿನ ವಿಷಯದಂತೆ, ರಾಜ್ಯದಲ್ಲಿ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬೇಡಿಕೆ ಮೇಲ ಮನೆ ಒದಗಿಸುವುದು.
2. ಫಲಾನುಭವಿಗಳ ಕುಟುಂಬವು ನಿವೇಶನವನ್ನು ಹೊಂದಿರಬೇಕು.
3. ಈಗಾಗಲೇ ಜಾರಿಯಲ್ಲಿರುವ ವಾರ್ಷಿಕ ಆದಾಯ ಮತ್ತು ಇತರೆ ಷರತ್ತುಗಳ ಪ್ರಕಾರ ಅರ್ಹತೆ ಇರಬೇಕು (ಮನೆ ಪುಸ್ತಕ).
4. ಈಗಾಗಲೇ ನಿಗಮದ ವೆಬ್‌ಸೈಟ್‌ನ ತಂತ್ರಾಂಶದಲ್ಲಿ ಬೇಡಿಕೆಗೆ ಅನುಗುಣವಾಗಿ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಕಾರ್ಯಾದೇಶ ನೀಡಲು ಅವಕಾಶ ಕಲ್ಪಿಸಲಾಗಿದೆ.
5. ಈ ಯೋಜನೆಯಡಿ ಬೇಡಿಕೆ ಮೇಲ್ ಮನೆ ಇರುವುದರಿಂದ ಯಾವುದೇ ಗುರಿಯ ಗರಿಷ್ಠ ಮಿತಿ ಇಲ್ಲದೆ ಗ್ರಾಮ ಪಂಚಾಯ್ತಿಗಳಲ್ಲಿ ಎಲ್ಲಾ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳಿಗೆ (ನಿವೇಶನ ಹೊಂದಿರಬೇಕು) ಗ್ರಾಮ ಸಭೆಯಿಂದ ಆಯ್ಕೆ ಮಾಡಲು ಸೂಚಿಸಿದೆ.
6. ಅದೇ ರೀತಿ ನಗರ ಪ್ರದೇಶಗಳಲ್ಲಿ ಕೂಡಾ ನಿವೇಶನ ಹೊಂದಿರುವ ಎಲ್ಲಾ ಅರ್ಹ ವಸತಿ ರಹಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬವನ್ನು ಆಯ್ಕೆ ಮಾಡಲು ಸೂಚಿಸಲಾಗಿದೆ
7. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಈ ಮೇಲ್ಕಂಡ ರೀತಿಯಲ್ಲಿ ನಿವೇಶನ ಹೊಂದಿರುವ ಅರ್ಹ ವಸತಿ ರಹಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳನ್ನು ಆಯ್ಕೆ ಪಟ್ಟಿ ತಯಾರಿಸಿ ನಿಯಮಾನುಸಾರ ಅರ್ಹತೆ ಪರಿಶೀಲಿಸಿಕೊಂಡು ತಂತ್ರಾಂಶದಲ್ಲಿ ಅಳವಡಿಸಲು ಸೂಚಿಸಲಾಗಿದೆ.
8. ತಂತ್ರಾಂಶದಲ್ಲಿ ಫಲಾನುಭವಿಗಳ ಪಟ್ಟಿಗಳನ್ನು ಅಳವಡಿಸಲು ಉದ್ದೇಶಿಸಿ ಈಗಾಗಲೇ ಅವಕಾಶ ಕಲ್ಪಿಸಲಾಗಿದ (ಆಯ್ಕೆ ಹೆಸರುಗಳನ್ನು ಅಳವಡಿಸಿದಾಗ ತಾನಾಗಿಯೇ ತಂತ್ರಾಂಶದಲ್ಲಿ ಹೆಚ್ಚುವರಿ ಗುರಿ ಸಿಪ್ಪುವುದು).
9. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ತಮ್ಮ ಬೇಡಿಕೆಗನುಗುಣವಾಗಿ ಗ್ರಾಮ ಪಂಚಾಯ್ತಿ/ನಗರ ಸ್ಥಳೀಯ ಸಂಸ್ಥೆಗಳು ಅಥವಾ ಆನ್‌ಲೈನ್‌ನಲ್ಲಿ ಅಥವಾ ಮೊಬೈಲ್ ಆಪ್‌ನಿಂದ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಹ ಫಲಾನುಭವಿಗಳನ್ನು ನಿಯಮಾನುಸಾರ ಆಯ್ಕೆ ಮಾಡುವುದು ಗ್ರಾಮೀಣ ಪ್ರದೇಶದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ನಗರ ಪ್ರದೇಶದಲ್ಲಿ ಜಿಲ್ಲಾಧಿಕಾರಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿ/ಪೌರಾಯುಕ್ತರು/ಆಯುಕ್ತರುಗಳ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಲು ಸೂಚಿಸಲಾಗಿದೆ.

ಈ ಪತ್ರದ ಒಂದು ಪ್ರತಿಯನ್ನು ಎಲ್ಲಾ ಗ್ರಾಮ ಪಂಚಾಯ್ತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಲು ಕೋರಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

16/5/17

ಮುನೀಷ್ ಮೌದ್ಗಿಲ್
ವ್ಯವಸ್ಥಾಪಕ ನಿರ್ದೇಶಕರು


ನೊಂದಾಯಿತ ಕಛೇರಿ : #1,2,3,4, ಐ.ಟಿ. ಪಾರ್ಕ್, 1ನೇ ಮಹಡಿ, 4ನೇ ಮುಖ್ಯರಸ್ತೆ, ರಾಜಾಜಿನಗರ ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು – 560 010.
ಕಛೇರಿ : 91-80-2311 8888, Extn.: ಪಿಐ ವಿಭಾಗ- 25 to 30, ತಾಂತ್ರಿಕ - 34 to 36, ಆರ್ಥಿಕ - 37 to 40, ಆಡಳಿತ - 42 & 43, ಗಣಕ ವಿಭಾಗ- 45 to 47,
ಫ್ಯಾಕ್ಸ್ : 91-80-2314 3130, ಈ ಮೇಲ್: rgrhcl@nic.in, rgrhcl@rediffmail.com ವೆಬ್‌ಸೈಟ್ : http://ashraya.kar.nic.in

RAJIV GANDHI RURAL HOUSING CORPORATION LTD.
(A Government of Karnataka Enterprise)

NO:SD RGRHCL 01 ANRT 03 2017-18

Date:22.05.2017

ಇವರಿಗೆ,

ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು
ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್

ಮಾನ್ಯರೆ,

ವಿಷಯ: ನಿವೇಶನ ಹೊಂದಿರುವ ಅರ್ಹ ವಸತಿ ರಹಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಡಾ॥.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ 2017–18ನೇ ಸಾಲಿಗೆ ತಾತ್ಕಾಲಿಕ ಗುರಿ ನಿಗದಿಪಡಿಸಿರುವ ಬಗ್ಗೆ.

ಉಲ್ಲೇಖ: ನಿಗಮದ ಪತ್ರ ಸಂ. **SD RGRHCL 01 ANRT 02 2017-18, ದಿನಾಂಕ: 16.05.2017.**

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2017–18ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ವಸತಿ ರಹಿತ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳಿಗೆ (ನಿವೇಶನ ಹೊಂದಿರುವ) ಡಾ॥.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ಬೇಡಿಕೆ ಮೇಲೆ ಮನೆ ಒದಗಿಸಲು ಉದ್ದೇಶಿಸಿದ್ದು, ಈ ಸಂಬಂಧವಾಗಿ ನಿಗಮವು ಉಲ್ಲೇಖ ಪತ್ರ(1)ರಲ್ಲಿ ಫಲಾನುಭವಿಗಳ ಆಯ್ಕೆಗೊಳಿಸಲು ಕ್ರಮ ವಹಿಸುವಂತೆ ಸೂಚಿಸಲಾಗಿತ್ತು.

ಮುಂದುವರೆದು, ಈ ಯೋಜನೆಯಡಿ 2017–18ನೇ ಸಾಲಿಗೆ ಗ್ರಾಮೀಣ ಹಾಗೂ ನಗರ ಪ್ರದೇಶಕ್ಕೆ ಮಂಜೂರು ಮಾಡಲಾಗಿರುವ ಮನೆಗಳ ಗ್ರಾಮ ಪಂಚಾಯತ್/ ನಗರ ಸ್ಥಳೀಯ ಸಂಸ್ಥೆವಾರು ತಾತ್ಕಾಲಿಕ ಗುರಿಯ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ ಹಾಗೂ ಸದರಿ ಗುರಿಯನ್ನು ನಿಗಮದ ಆನ್‌ಲೈನ್‌ನಲ್ಲಿ 2017–18ನೇ ಶ್ರೇಣಿಯಡಿ ನಿಗಧಿಪಡಿಸಲಾಗಿರುತ್ತದೆ.

ಈ ಪತ್ರದ ಒಂದು ಪ್ರತಿಯನ್ನು ತಮ್ಮ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು/ ತಾಲ್ಲೂಕು ಪಂಚಾಯತ್/ ಗ್ರಾಮ ಪಂಚಾಯತ್‌ಗಳಿಗೆ ಒದಗಿಸಲು ಕೋರಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ
24/5/17
ಮುನೀಷ್ ಮೌದ್ಗಿಲ್
ವ್ಯವಸ್ಥಾಪಕ ನಿರ್ದೇಶಕರು

Regd. Off. : #1,2,3,4. I.T. Park, 1st Floor, 4th Main Road, Rajajinagar Industrial Estate, Rajajinagar, Bangalore - 560 010.
Off. : 91-80-2311 8888, Extn.: PI Division - 25 to 30, Technical - 34 to 36, Finance - 37 to 40, Admn. - 42 & 43, Computer - 45 to 47,
Fax : 91-80-23143130, Email : rgrhcl@nic.in, rgrhcl@rediffmail.com Website : http.//ashraya.kar.nic.in

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

NO:SD RGRHCL 01 ANRT 04 2017-18 Date:17.06.2017.

ಇವರಿಗೆ,

ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು
ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್

ಮಾನ್ಯರೆ,

ವಿಷಯ: ಡಾ||.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ನಿವೇಶನ ಹೊಂದಿರುವ ಅರ್ಹ ವಸತಿ ರಹಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳಿಗೆ 2017-18ನೇ ಸಾಲಿಗೆ ಬೇಡಿಕೆ ಮೇಲೆ ಮನೆ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ವಇ 35 ಹೆಚ್‌ಎಹೆಚ್ 2017(1), ಬೆಂಗಳೂರು, ದಿನಾಂಕ:05.06.2017

2. ನಿಗಮದ ಪತ್ರ ಸಂ. SD RGRHCL 01 ANRT 02 2017-18, ದಿನಾಂಕ:16.05.2017.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2017-18ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ವಸತಿ ರಹಿತ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳಿಗೆ (ನಿವೇಶನ ಹೊಂದಿರುವ) ಡಾ||.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ಬೇಡಿಕೆ ಮೇಲೆ ಮನೆ ಒದಗಿಸಲು ಉದ್ದೇಶಿಸಿದ್ದು, ಈ ಸಂಬಂಧವಾಗಿ ಸರ್ಕಾರವು ಉಲ್ಲೇಖ (1)ರಲ್ಲಿ ಆದೇಶ ಹೊರಡಿಸಲಾಗಿದೆ.(ಪ್ರತಿ ಲಗತ್ತಿಸಿದೆ)

ಈ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರವು ಉಲ್ಲೇಖ(1)ರ ಆದೇಶದಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಈ ಪತ್ರದೊಂದಿಗೆ ಲಗತ್ತಿಸಿದೆ. ಈ ಯೋಜನೆಯು ಬೇಡಿಕೆಯಾಧಾರಿತವಾಗಿರುವುದಿಂದ ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ಪಂಚಾಯಿತಿ ಮತ್ತು ನಗರ ಪ್ರದೇಶದಲ್ಲಿ ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿ/ಆಯುಕ್ತರು ಎಲ್ಲಾ ಅರ್ಹ ಫಲಾನುಭವಿಗಳಿಗೆ ಕಾರ್ಯಾದೇಶ ನೀಡುವುದು.

ಈ ಯೋಜನೆಯು ಬೇಡಿಕೆಯಾಧಾರಿತವಾಗಿರುವುದರಿಂದ ಸಾಂಕೇತಿಕವಾಗಿ ಗುರಿ ನಿಗದಿಪಡಿಸಲಾಗಿದ್ದು, ಈ ಬಗ್ಗೆ ಕೂಡಲೇ ಕ್ರಮ ವಹಿಸಲು ಸೂಚಿಸಿದೆ.

ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು/ತಾಲ್ಲೂಕು ಪಂಚಾಯತ್/ಗ್ರಾಮ ಪಂಚಾಯತ್‌ಗಳಿಗೆ ಸರ್ಕಾರದ ಆದೇಶ ಮತ್ತು ಮಾರ್ಗಸೂಚಿಗಳ ಒಂದು ಪ್ರತಿಯನ್ನು ಒದಗಿಸಲು ತಿಳಿಸಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

ಮುನೀಷ್ ಮೌದ್ಗಿಲ್
ವ್ಯವಸ್ಥಾಪಕ ನಿರ್ದೇಶಕರು

ನೋಂದಾಯಿತ ಕಛೇರಿ : #1,2,3,4, ಐ.ಟಿ. ಪಾರ್ಕ್, 1ನೇ ಮಹಡಿ, 4ನೇ ಮುಖ್ಯರಸ್ತೆ, ರಾಜಾಜಿನಗರ ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು – 560 010.
ಕಛೇರಿ : 91-80-2311 8888, Extn.: ಪಿಐ ವಿಭಾಗ- 25 to 30, ತಾಂತ್ರಿಕ - 34 to 36, ಆರ್ಥಿಕ - 37 to 40, ಆಡಳಿತ - 42 & 43, ಗಣಕ ವಿಭಾಗ- 45 to 47,
ಫ್ಯಾಕ್ಸ್ : 91-80-2314 3130, ಈ ಮೇಲ್: rgrhcl@nic.in, rgrhcl@rediffmail.com ವೆಬ್‌ಸೈಟ್ : http://ashraya.kar.nic.in

# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

SD RGRHCL 01 ANTR 05 2017-18 / 5783 — Date: 03.07.2017

ಇವರಿಗೆ,

ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮತ್ತು
ಜಿಲ್ಲಾಪಂಚಾಯ್ತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ.

ಮಾನ್ಯರ,

ವಿಷಯ: ಬೇಡಿಕೆ ಆಧಾರದ ಮೇಲೆ ಪರಿಶಿಷ್ಟ ಜಾತಿ ಮತ್ತು ಪಂಗಡದ ವರ್ಗಕ್ಕೆ ಸೇರಿರುವ ಅರ್ಹ (ನಿವೇಶನ ಹೊಂದಿರುವ) ಕುಟುಂಬಗಳಿಗೆ ಬೇಡಿಕೆ ಮೇಲೆ ಡಾ.ಬಿ ಆರ್ ಅಂಬೇಡ್ಕರ್ ನಿವಾಸ್ ಯೋಜನೆಯಡಿಯಲ್ಲಿ ವಸತಿ ಒದಗಿಸುವ ಬಗ್ಗೆ.

ಉಲ್ಲೇಖ:
1 ನಿಗಮದ ಪತ್ರ ಸಂಖ್ಯೆ SD RGRHCL 01 ANRT 04 2017-18, ದಿನಾಂಕ: 17.06.2017.
2 ಸರ್ಕಾರದ ಆದೇಶ ಸಂಖ್ಯೆ: ವಇ 35 ಹೆಚ್‌ಎಹೆಚ್ 2017(1), ಬೆಂಗಳೂರು, ದಿನಾಂಕ:05.06.2017

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಎಲ್ಲಾ ಗ್ರಾಮ ಪಂಚಾಯ್ತಿ ಮತ್ತು ಕ್ಷೇತ್ರಾಧಿಕಾರಿಗಳಿಗೆ ಕೆಳಕಂಡ ಸ್ಪಷ್ಟೀಕರಣ ನೀಡಲು ಬಯಸುತ್ತೇನೆ:

1. ಗ್ರಾಮ ಪಂಚಾಯ್ತಿ/ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅರ್ಹ ವಸತಿ ರಹಿತ (ನಿವೇಶನ ಹೊಂದಿರುವ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳನ್ನು ಮಾತ್ರ ಆಯ್ಕೆ ಮಾಡುವುದು. ಇದಕ್ಕೆ ಗರಿಷ್ಟ ಮಿತಿ ಇರುವುದಿಲ್ಲ ಹಾಗೂ ಅರ್ಹತೆ ಪ್ರಕಾರ ಆಯ್ಕೆ ಮಾಡಬಹುದಾಗಿದೆ.
2. ಈ ಸಂದರ್ಭದಲ್ಲಿ ಅರ್ಹತೆ ಮಾನದಂಡ ಈಗಾಗಲೇ ಜಾರಿಯಲ್ಲಿರುವ 'ಮನೆ' ಪುಸ್ತಕದ ಪ್ರಕಾರವಾಗಿರುತ್ತದೆ. ಯಾವುದೇ ಸಂದರ್ಭದಲ್ಲಿ ಅನರ್ಹ ಕುಟುಂಬ/ವ್ಯಕ್ತಿ ಅಥವಾ ಈಗಾಗಲೇ ಸರ್ಕಾರದಿಂದ ಯಾವುದೇ ವಸತಿ ಯೋಜನೆಗಳಡಿಯಲ್ಲಿ ಯಾವುದೇ ವರ್ಷದಲ್ಲಿ ವಸತಿ ಪಡೆದಿರುವ ಕುಟುಂಬಗಳಿಗೆ ಮತ್ತೆ ವಸತಿ ಸೌಕರ್ಯ ನೀಡಲು ಅವಕಾಶವಿರುವುದಿಲ್ಲ.
3. ಮೇಲ್ಕಂಡ ಪ್ರಕಾರ ಅರ್ಹವಿರುವ ವಸತಿ ರಹಿತ ಕುಟುಂಬಗಳಿಗೆ ಗ್ರಾಮ ಪಂಚಾಯ್ತಿ/ನಗರ ಸ್ಥಳೀಯ ಸಂಸ್ಥೆಯು ಆಯ್ಕೆಗೊಳಿಸಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಸಾಫ್ಟ್‌ವೇರ್‌ನಲ್ಲಿ ಖಾಲಿ ನಿವೇಶನದ ಜಿಪಿಎಸ್ ಛಾಯಾಚಿತ್ರದೊಂದಿಗೆ ಪ್ರಸ್ತಾವನೆಯನ್ನು ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿ/ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವುದು. ಕಾರ್ಯನಿರ್ವಹಣಾಧಿಕಾರಿಗಳು/ನಗರ ಸ್ಥಳೀಯ ಸಂಸ್ಥೆಗಳು ಫಲಾನುಭವಿಗಳ ಅರ್ಹತೆ ಪರಿಶೀಲಿಸಿಕೊಂಡು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ/ಜಿಲ್ಲಾಧಿಕಾರಿಗಳಿಗೆ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು/ಜಿಲ್ಲಾಧಿಕಾರಿಗಳು ಫಲಾನುಭವಿಗಳ ಅರ್ಹತೆ ದೃಢೀಕರಿಸಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ತಂತ್ರಾಂಶದ ಮೂಲಕ ಈಗಾಗಲೇ ಚಾಲನೆಯಲ್ಲಿರುವ ಪದ್ಧತಿ ಪ್ರಕಾರ ಕಳುಹಿಸುವುದು.
4. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಜಿಪಿಎಸ್ ಛಾಯಾಚಿತ್ರ Geo Duplicate ಮತ್ತು Name Duplicate ಹಾಗೂ ಇತರ ನಿಯಮಗಳು ಅನುಪಾಲನೆ ಆಗಿರುವ ಬಗ್ಗೆ ಪರಿಶೀಲಿಸಿಕೊಂಡು ಗ್ರಾಮ ಪಂಚಾಯ್ತಿಗಳಿಗೆ ಕಾರ್ಯಾದೇಶ ನೀಡಲು ತಂತ್ರಾಂಶದ ಮೂಲಕ ಕಳುಹಿಸಲಾಗುವುದು.

ಈ ಮೇಲ್ಕಂಡ ಪದ್ಧತಿಗಳ ಸಂಪೂರ್ಣ ನಿಯಮಗಳನ್ನು ಅನುಪಾಲನೆ ಮಾಡಲು ಹಾಗೂ ಒಂದೇ ಕುಟುಂಬ ಒಂದಕ್ಕಿಂತ ಹೆಚ್ಚು ಬಾರಿ ವಸತಿ ಸೌಕರ್ಯ ಪಡೆಯದಂತೆ ತಡೆಯುವುದು ಅನಿವಾರ್ಯವಾಗಿದೆ.

ಈ ಪತ್ರದಲ್ಲಿನ ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸಲು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ, ತಾಲ್ಲೂಕು ಪಂಚಾಯ್ತಿಗಳಿಗೆ ಮತ್ತು ಗ್ರಾಮ ಪಂಚಾಯ್ತಿಗಳಿಗೆ ಪತ್ರದ ಪ್ರತಿಯನ್ನು ಕಳುಹಿಸುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

3/7/17

ಮುನೀಷ್ ಮೌದ್ಗಿಲ್
ವ್ಯವಸ್ಥಾಪಕ ನಿರ್ದೇಶಕರು

[illegible] : #1 2 3 4 [illegible] – 560 010